**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಅಕ್ಷರ ದಾಸೋಹ ಕಾರ್ಯಕ್ರಮಕ್ಕೆ 2013-14ನೇ ಸಾಲಿನ ಆಯವ್ಯಯದನ್ವಯ ಮೊದಲನೇ ತ್ರೈಮಾಸಿಕ ಅನುದಾನ ಬಿಡುಗಡೆಗೊಳಿಸುವ ಬಗ್ಗೆ.

ಓದಲಾಗಿದೆ: ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮ.ಉ.ಯೋ ರವರ ಪತ್ರ ಸಂಖ್ಯೆ:ಎಂ:6/ಅ.ದಾ/ಅ.ಬಿ01/13-14 ದಿನಾಂಕ:10-04-2013

**ಪ್ರಸ್ತಾವನೆ:**

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜಂಟಿ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು 2013-14ನೇ ಸಾಲಿಗೆ ಅಕ್ಷರ ದಾಸೋಹ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಶೇ 75:25 ರ ಪಾಲುದಾರಿಕೆಯಲ್ಲಿ ಅನುಷ್ಠಾನಗೊಳಿಸುವ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 8ನೇ ತರಗತಿ ಮಕ್ಕಳಿಗೆ ಹಾಗೂ 9 ರಿಂದ 10ನೇ ತರಗತಿಯ ಮಕ್ಕಳಿಗೆ ರಾಜ್ಯ ಸರ್ಕಾರದ ಶೇ 100ರ ಅನುದಾನದಂತೆ ಶಾಲೆ ನಡೆಯುವ 234 ದಿನಗಳಿಗಾಗಿ 1 ರಿಂದ 10ನೇ ತರಗತಿವರೆಗಿನ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ, ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿಪಡಿಸಿರುವ ರೂ. 81342.28 ಲಕ್ಷಗಳ ಮೊತ್ತದಲ್ಲಿ ಶೇ.25 ರಂತೆ ಮೊದಲನೇ ತ್ರೈಮಾಸಿಕವಾಗಿ ರೂ.20335.57 ಲಕ್ಷಗಳನ್ನು ಬಿಡುಗಡೆಗೊಳಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

2. ಅದರಂತೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:: ಇಡಿ 6 ಎಂಎಂಎಸ್2013 ಬೆಂಗಳೂರು, ದಿನಾಂಕ:09.05.2013**

3. ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಲಿಂಕ್ ಡಾಕ್ಯೂಮೆಂಟ್ ಲೆಕ್ಕ ಶೀರ್ಷಿಕೆ 2202-00-101-0-18(ಯೋಜನೆ) ಲಿಂಕ್ ಕೋಡ್ 2202-01-196-6-01 ರಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮದಡಿ ಮಧ್ಯಾಹ್ನ ಉಪಹಾರ ಯೋಜನೆಯ ಅನುಷ್ಠಾನಕ್ಕಾಗಿ 2013-14 ನೇ ಸಾಲಿನ ಮೊದಲ ತ್ರೈಮಾಸಿಕವಾಗಿ ರೂ.20335.57 (ಇಪ್ಪತ್ತು ಸಾವಿರದ ಮುನ್ನೂರ ಮುವತ್ತೈದು ಲಕ್ಷ ಮತ್ತು ಐವತ್ತೇಳು ಸಾವಿರ ರೂಪಾಯಿಗಳು ಮಾತ್ರ) ಗಳನ್ನು (ಏಪ್ರಿಲ್-2013 ರಿಂದ ಜೂನ್-2013ರ ವರೆಗೆ) ಈ ಆದೇಶದೊಂದಿಗೆ ಅನುಬಂಧಿಸಿದಂತೆ ಜಿಲ್ಲಾವಾರು ಹಂಚಿಕೆ ಮಾಡಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಆದೇಶಿಸಿದೆ. ಬಿಡುಗಡೆಗೊಳಿಸಲಾದ ಈ ಅನುದಾನವನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿಗಳಿಗೆ ಮರು ಬಿಡುಗಡೆ ಮಾಡಲು ಸೂಚಿಸಿದೆ. ಮುಖ್ಯ ಲೆಕ್ಕಾಧಿಕಾರಿಗಳಿಗೆ ರಾಜ್ಯ ವಲಯದಿಂದ ಡ್ರಾ ಮಾಡಿ ಜಿಲ್ಲಾ ಪಂಚಾಯತ್ ನಿಧಿ-1ಕ್ಕೆ ಜಮೆ ಮಾಡಿ ಅಕ್ಷರ ದಾಸೋಹ ಅನುಷ್ಠಾನಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

4. ಈ ಆದೇಶವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಆರ್ಥಿಕ ಇಲಾಖೆಯ ಅಧಿಕಾರಿ ಪ್ರತ್ಯಾಯೋಜನೆ ನೀಡಿ ಹೊರಡಿಸಿರುವ ಆದೇಶ ಸಂಖ್ಯೆ:ಎಫ್‌ಡಿ 04 ಟಿಎಫ್‌ಪಿ 2012 ದಿನಾಂಕ: 27-4-2012ರ ಸಹಮತಿಯನ್ವಯ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಐ.ಎಫ್.ಮಾಗಿ)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

**ಇವರಿಗೆ,**

1. ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು.

2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಜಂಟಿ ನಿರ್ದೇಶಕರು, ಸಾ.ಶಿ.ಇಲಾಖೆ, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು.
4. ನಿರ್ದೇಶಕರು, ಖಜಾನಾ ನಿರ್ದೇಶನಾಲಯ, ಬೆಂಗಳೂರು.
5. ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, #49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು
6. ಉಪಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಉಪಕಾರ್ಯದರ್ಶಿಗಳ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.
8. ರಾಜ್ಯದ ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರವರಿಗೆ,
9. ರಾಜ್ಯದ ಎಲ್ಲಾ ಜಿಲ್ಲೆಗಳ ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆರವರಿಗೆ,
10. ಶಾಲಾ ರಕ್ಷಾಕಡತ/ಹೆಚ್ಚುವರಿ ಪ್ರತಿಗಳು.

ಅಕ್ಷರ ದಾಸೋಹ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2013-14ನೇ ಸಾಲಿನಲ್ಲಿ ಮೊದಲ ತ್ರೈಮಾಸಿಕವಾಗಿ ಬಿಡುಗಡೆ ವಿವರ ಸರ್ಕಾರಿ ಆದೇಶ ಸಂಖ್ಯೆ ಇಡಿ 6 ಎಂಎಂಎಸ್ 2013 ದಿ:09.05.2013

| ಕ್ರ ಸಂ | ಜಿಲ್ಲಾ ಪಂಚಾಯತ್ | ಜಿಲ್ಲಾ ಕೋಡ್ | 2013-14ನೇ ಸಾಲಿನಲ್ಲಿ ಒದಗಿಸಿದ ಅನುದಾನ (ರೂ.ಲಕ್ಷಗಳಲ್ಲಿ) | ಮೊದಲನೇ ತ್ರೈಮಾಸಿಕದಲ್ಲಿ ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ಬೆಂಗಳೂರು ನಗರ | 401 | 3568.66 | 892.17 |
| 2 | ಬೆಂಗಳೂರು ಗ್ರಾಮಾಂತರ | 402 | 1444.40 | 361.10 |
| 3 | ಚಿತ್ರದುರ್ಗ | 403 | 3716.00 | 929.00 |
| 4 | ಕೋಲಾರ | 404 | 2166.00 | 541.50 |
| 5 | ಶಿವಮೊಗ್ಗ | 405 | 3018.42 | 754.61 |
| 6 | ತುಮಕೂರು | 406 | 4000.00 | 1000.00 |
| 7 | ಮೈಸೂರು | 407 | 4281.53 | 1070.38 |
| 8 | ಚಿಕ್ಕಮಗಳೂರು | 408 | 1731.27 | 432.82 |
| 9 | ದಕ್ಷಿಣ ಕನ್ನಡ | 409 | 2466.00 | 616.50 |
| 10 | ಹಾಸನ | 410 | 2200.00 | 550.00 |
| 11 | ಕೊಡಗು | 411 | 866.60 | 216.65 |
| 12 | ಮಂಡ್ಯ | 412 | 3374.88 | 843.72 |
| 13 | ಬೆಳಗಾವಿ | 413 | 7685.90 | 1921.48 |
| 14 | ಬಿಜಾಪುರ | 414 | 2675.00 | 668.75 |
| 15 | ಧಾರವಾಡ | 415 | 2383.00 | 595.75 |
| 16 | ಉತ್ತರ ಕನ್ನಡ | 416 | 2860.00 | 715.00 |
| 17 | ಗುಲ್ಬರ್ಗ | 417 | 4262.50 | 1065.63 |
| 18 | ಬಳ್ಳಾರಿ | 418 | 2437.00 | 609.25 |
| 19 | ಬೀದರ್ | 419 | 2500.00 | 625.00 |
| 20 | ರಾಯಚೂರು | 420 | 3434.81 | 858.70 |
| 21 | ಯಾದಗಿರಿ | 421 | 1991.20 | 497.80 |
| 22 | ದಾವಣಗೆರೆ | 451 | 3213.78 | 803.45 |
| 23 | ರಾಮನಗರ | 452 | 1202.00 | 300.50 |
| 24 | ಚಿಕ್ಕಬಳ್ಳಾಪುರ | 453 | 1670.00 | 417.50 |
| 25 | ಚಾಮರಾಜನಗರ | 456 | 1320.00 | 330.00 |
| 26 | ಉಡುಪಿ | 457 | 1633.88 | 408.47 |
| 27 | ಬಾಗಲಕೋಟೆ | 461 | 3235.10 | 808.78 |
| 28 | ಗದಗ | 462 | 1590.35 | 397.59 |
| 29 | ಹಾವೇರಿ | 463 | 2414.00 | 603.50 |
| 30 | ಕೊಪ್ಪಳ | 466 | 2000.00 | 500.00 |
| | ಒಟ್ಟು | | **81342.28** | **20335.57** |

(ಪಿ.ಎಫ್.ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ(ಯೋಜನೆ)